ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ವಿದ್ಯಾರ್ಥಿಗಳಿಗಾಗಿ ಸರಕಾರ ವಿದ್ಯಾರ್ಥಿನಿಲಯಂಗಳು.

೮೮೮. ಶ್ರೀ ವಸಂತ ಬಂಗೇರ (ಬೆಳ್ತಂಗಡಿ). ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಸರ್ಕಾರ ನಡೆಸುತ್ತಿರುವ ಹಾಸ್ಟೆಲ್‌ಗಳೆಷ್ಟು ? (ಪ್ರಾಥಮಿಕ, ಪ್ರೌಢಶಾಲೆ, ಕಾಲೇಜುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ವಿವರ ನೀಡುವುದು)

ಆ) ಕರ್ನಾಟಕ ರಾಜ್ಯದಲ್ಲಿರುವ ಆಶ್ರಮ ಶಾಲೆಗಳೆಷ್ಟು ?

ಇ) ಹಾಸ್ಟೆಲ್‌ಗಳು ಹಾಗೂ ಆಶ್ರಮ ಶಾಲೆಗಳಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯೆಷ್ಟು ? (ಪ್ರತ್ಯೇಕವಾಗಿ ವಿವರ ನೀಡುವುದು)

ಈ) ಹಾಸ್ಟೆಲ್‌ಗಳಲ್ಲಿರುವ ಒಬ್ಬ ವಿದ್ಯಾರ್ಥಿಗಳಿಗೆ ತಿಂಗಳೊಂದಕ್ಕೆ ಸರ್ಕಾರವು ಎಷ್ಟು ಖರ್ಚು ಮಾಡುತ್ತಿದೆ ? ರಾಜ್ಯದಲ್ಲಿರುವ ಎಲ್ಲಾ ಹಾಸ್ಟೆಲಿನ ಒಟ್ಟು ವಿದ್ಯಾರ್ಥಿಗಳಿಗಾಗಿ ವರ್ಷ ಒಂದಕ್ಕೆ ಸರ್ಕಾರ ಎಷ್ಟು ಖರ್ಚು ಮಾಡುತ್ತಿದೆ ?

ಉ) ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳಿಗೆ ತಲಾ ಖರ್ಚು ಮಾಡುತ್ತಿರುವ ಹಣ ಕಡಿಮೆಯಾಗಿ ಅವರಿಗೆ ಆರೋಗ್ಯಕರವಾದ ಊಟ ಸಿಗುವುದಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ(ಸಮಾಜ ಕಲ್ಯಾಣ ಸಚಿವರು).—

ಅ) ೧೬೭೭ ಹಾಸ್ಟೆಲ್‌ಗಳು

ಮೆಟ್ರಿಕ್ ಪೂರ್ವ ಹಾಸ್ಟೆಲ್	...	೧೩೦೮
ಮೆಟ್ರಿಕ್ ನಂತರದ ಹಾಸ್ಟೆಲ್	...	೧೬೫
ಆಶ್ರಮ ಮತ್ತು ವಸತಿ ಶಾಲೆ	...	೨೦೪

ಆ) ೨೦೪

ಇ) ೯೩,೫೨೨

ಆಶ್ರಮ : ವಸತಿ ಶಾಲೆಗಳಲ್ಲಿರುವ ಒಟ್ಟು ಮಕ್ಕಳ ಸಂಖ್ಯೆ	...	೧೧,೨೬೦
ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿರುವ ಒಟ್ಟು ಸಂಖ್ಯೆ	...	೬೭,೯೦೮
ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ಒಟ್ಟು ಸಂಖ್ಯೆ	...	೧೪,೩೫೪

ಈ) ಆಶ್ರಮ ಶಾಲೆ : ವಸತಿ ಶಾಲೆ. ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ... ೭೫–೦೦ ರೂ.ಗಳು.
ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ... ೧೦೦–೦೦ ರೂ.ಗಳು.
ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ... ೧೫೦–೦೦ ರೂ.ಗಳು.
ಒಂದು ವರ್ಷಕ್ಕೆ ಆಗುವ ಒಟ್ಟು ವೆಚ್ಚ ... ೧೭೧೮.೭೬ ಲಕ್ಷ ರೂ.ಗಳು.

ಉ) ಊಟದ ವೆಚ್ಚವನ್ನು ಹೆಚ್ಚಿಸಲು ಪರಿಶೀಲಿಸಲಾಗುತ್ತಿದೆ.

ಕ. ರಾ. ರ. ಸಾ. ಸಂಸ್ಥೆಯ ಲಾಭ – ನಷ್ಟ.

೮೯೧. ಶ್ರೀಮತಿ ಮನೋರಮ ಮಧ್ವರಾಜ್(ಉಡುಪಿ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೮೬-೮೭, ೧೯೮೭-೮೮, ಮತ್ತು, ೧೯೮೮–೮೯ರ ಲಾಭ ಅಥವಾ ನಷ್ಟದ ವಿವರಗಳೇನು ? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಮೇಲ್ಕಂಡ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಗಳಿಸಿದ ಮೋಟಾರು ವಾಹನ ತೆರಿಗೆಯ ಆದಾಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಡಲ ಪಂಚಾಯಿತಿಗಳು ಪುರಸಭೆಗಳು ಮತ್ತು ನಗರ ಸಭೆಗಳಿಗೆ ಹಂಚಿರುವ ಪಾಲೆಷ್ಟು ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೮೬-೮೭, ೧೯೮೭-೮೮ ಮತ್ತು ೧೯೮೮-೮೯ (ಫೆಬ್ರುವರಿ ೧೯೮೯ರವರೆಗೆ) ವಿಭಾಗವಾರು ಲಾಭ ನಷ್ಟದ ವಿವರ ಈ ಕೆಳಕಂಡಂತಿದೆ.—

ವಿಭಾಗಗಳು	೧೯೮೬-೮೭	೧೯೮೭-೮೮	೧೯೮೮-೮೯ (ಫೆಬ್ರುವರಿ ೮೯ ರವರೆಗೆ)
ಬೆಂಗಳೂರು	+೧೮೮.೨೮	+೫೨.೮೫	+೩೬೩.೭೧
ಕೋಲಾರ	+೧೨.೫೦	- ೧೭.೮೧	- ೪೬ ೧೭
ಮೈಸೂರು	- ೧೬೯.೧೧	- ೮೮.೦೦	- ೫೮,೫೯
ಹಾಸನ	- ೨೭.೯೯	- ೧೭.೫೬	- ೪೧.೦೭
ಮಂಗಳೂರು	- ೨೨.೩೪	- ೧.೯೪	- ೧೫.೯೪
ಬೆಳಗಾವಿ	- ೧೨೯.೭೯	+೧೬೮.೮೨	+೧೫೫.೫೦
ಹುಬ್ಬಳ್ಳಿ	- ೯೨.೩೩	- ೫೦.೨೩	- ೨೩ ೧೫
ವಿಜಾಪುರ	- ೪೫.೩೬	- ೫೭ .೨೭	- ೨೧.೦೭
ಉತ್ತರ ಕನ್ನಡ	- ೨೩.೮೩	- ೧೦.೯೪	- ೪೯.೨೭
ಗುಲ್ಬರ್ಗ	- ೨೩೫.೫೦	- ೨೯೬.೪೨	- ೫೩೭.೯೧
ರಾಯಚೂರು	- ೨೯೨.೧೬	- ೨೮೫.೧೭	- ೩೪೧.೯೯
ಬಳ್ಳಾರಿ	- ೧೧೬.೬೨	- ೪೨.೦೫	- ೩೩.೧೨
ಬೆಂ. ನ. ಸಾ.	- ೭೩೫.೯೪	- ೯೮೭.೭೯	- ೧೨೪೭.೯೯
ಒಟ್ಟು	- ೧೫೫೮.೬೧	- ೧೪೯೮.೯೭	-೧೯೯೭.೦೩
ಇತರೆ ಆದಾಯ	೭೬೦.೯೦	೯೯೯.೩೮	೧೦೨೧.೧೨
ಒಟ್ಟು	- ೭೯೭.೭೧	- ೪೯೯.೫೯	- ೮೯೫.೯೧

ಆ) ವರ್ಷ	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೋಟಾರು ವಾಹನಗಳ ತೆರಿಗೆಯ ರೂಪದಲ್ಲಿ ಪಡೆದಿರುವ ಆದಾಯ	ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಾದ ಮಂಡಲಿ ಪಂಚಾಯಿತಿ ಪುರಸಭೆ ಮತ್ತು ನಗರ ಸಭೆಗಳಿಗೆ ಬಿಡುಗಡೆ ಮಾಡಿದ ಪರಿಹಾರ ಧನ
	(ರೂ. ಗಳಲ್ಲಿ)	(ರೂ. ಗಳಲ್ಲಿ)
೧೯೮೬-೮೭	೯,೨೦,೦೮,೩೦೨.೫೫	೧.೭೮,೧೧೫.೦೦
೧೯೮೭-೮೮	೯.೪೫.೫೫೫.೧೭೦.೩೦	೧,೭೮ ೧೧೫.೦೦
೧೯೮೮-೮೯	೬,೩೮.೩೫ ೪೯೯.೦೭	
	(ದಿನಾಂಕ ೧-೪-೮೮ ರಿಂದ ೩೦-೧೧-೮೮ ರವರೆಗೆ)	೧೯೮೮-೮೯ನೇ ಸಾಲಿನಿಂದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯು ಬಿಡುಗಡೆ ಮಾಡುವುದು.